# ಪೊಲೀಸ್ ಪಾತ್ರದ ಆಸೆಯಲ್ಲಿ ನಿಖಿತಾ!

**ಚಂದನವನದಲ್ಲಿ ಹೊಸತಾಗಿ ಕಾಣುತ್ತಿರುವ ಮುಖಗಳಲ್ಲಿ ನಿಖಿತಾ ಸ್ವಾಮಿ ಕೂಡ ಒಬ್ಬರು. ವ್ಯಾಪಾರಿ ಮತ್ತು ಪ್ರಯೋಗಾತ್ಮಕ ಎರಡೂ ಬಗೆಯ ಪಾತ್ರಗಳ ಮೂಲಕವೂ ತಮ್ಮ ವೃತ್ತಿಬದುಕನ್ನು ರೂಪಿಸಿಕೊಳ್ಳುತ್ತಿರುವ ಅವರಿಗೆ, ಆ್ಯಕ್ಷನ್ ಸಿನಿಮಾದಲ್ಲಿ ನಟಿಸುವ ಕನಸಿದೆ.**

■ ಪದ್ಮನಾಭ ಭಟ್



ಎಂಜಿನಿಯರಿಂಗ್ ಓದಿ, ಅಲ್ಲಿನ ಏಕತಾನತೆಗೆ ಬೇಸತ್ತು, ಮನಸಿನ ಮಾತು ಕೇಳಿ ಬಣ್ಣದ ಲೋಕಕ್ಕೆ ಅಡಿಯಿಟ್ಟವರ ದೊಡ್ಡ ದಂಡೇ ಗಾಂಧಿನಗರದಲ್ಲಿದೆ. ನಿಖಿತಾ ಸ್ವಾಮಿ ಅವರ ಹಿನ್ನೆಲೆಯೂ ಇದೇ. ಶಿಕಾರಿಪುರ ಮೂಲದ ಅವರು ಬೆಳೆದಿದ್ದು, ಓದಿದ್ದೆಲ್ಲ ಬೆಂಗಳೂರಿನಲ್ಲಿಯೇ. ಕಾಲೇಜು ದಿನಗಳಲ್ಲೇ ಮಾಡೆಲಿಂಗ್, ಜಾಹೀರಾತುಗಳಲ್ಲಿ ಭಾಗವಹಿಸುತ್ತಿದ್ದ ನಿಖಿತಾ ನಂತರ ಇನ್ಫೋಸಿಸ್‌ನಲ್ಲಿ ಕೆಲಸಕ್ಕೆ ಸೇರಿಕೊಂಡರು. ಫೇಸ್‌ಬುಕ್ ಮೂಲಕ ಆಮಂತ್ರಣ ಸಿಕ್ಕಿದ ಆಡಿಷನ್‌ನಲ್ಲಿ ಭಾಗವಹಿಸಿ 'ಸದ್ದು' ಸಿನಿಮಾಗೆ ನಾಯಕಿಯಾಗಿ ಆಯ್ಕೆಯಾದರು. ಅದುವರೆಗೆ ನಟನೆಯ ಎಬಿಸಿಡಿ ಗೊತ್ತಿಲ್ಲದ ಅವರಿಗೆ ನೀನಾಸಂನಲ್ಲಿ ಓದಿದ ರಂಗಶಿಕ್ಷಕರೊಬ್ಬರಿಂದ ಒಂದು ತಿಂಗಳ ನಟನೆಯ ಪಾಠವನ್ನು ಮಾಡಿಸಲಾಯ್ತು.

ಮೊದಲ ಅವಕಾಶದಲ್ಲಿಯೇ ನಾಯಕಿಪ್ರಧಾನ ಸಿನಿಮಾದಲ್ಲಿ ನಟಿಸಲು ಸಿಕ್ಕಿದ್ದು ನಿಖಿತಾ ಅವರ ಆತ್ಮವಿಶ್ವಾಸವನ್ನೂ ಹೆಚ್ಚಿಸಿತು.

ಅದರ ನಂತರ, 'ಪನ್'. 'ಜಲ್ಲಿಕಟ್ಟು' ಸಿನಿಮಾಗಳಲ್ಲಿ ನಟಿಸಿದರು. ಎಲ್ಲವೂ ಪಕ್ಕಾ ಕಮರ್ಷಿಯಲ್ ಸಿನಿಮಾಗಳು. ನಂತರ ಅವರಿಗೆ ಸಿಕ್ಕಿದ್ದು 'ಒಂದು ದಿನ, ಒಂದು ಕ್ಷಣ' ಎಂಬ ಪ್ರಯೋಗಾತ್ಮಕ ಚಿತ್ರ. 'ಈ ಚಿತ್ರದಲ್ಲಿ ನಾನು ಪೂರ್ತಿ ಡಿ ಗ್ಲ್ಯಾಮರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಮೇಕಪ್ ಇಲ್ಲದೇ ನಟಿಸಿದ್ದೇನೆ' ಎನ್ನುತ್ತಾರೆ ಅವರು.

ನಂತರ 'ಬ್ರಹ್ಮಪುತ್ರ' ಸಿನಿಮಾದಲ್ಲಿ ನಟಿಸಿದರು. ಅಷ್ಟರಲ್ಲಿ ತೆಲುಗಿನ ಒಂದು ಸಿನಿಮಾದಲ್ಲಿ ನಟಿಸುವ ಅವಕಾಶ ಬಂತು. 'ತೆಲುಗು ಸಿನಿಮಾದಲ್ಲಿ ನಟಿಸಿದ್ದು ನನಗೊಂದು ದೊಡ್ಡ ಪಾಠ. ಯಾಕೆಂದರೆ ಅಲ್ಲಿಯವರೆಗೆ ಕಂಫರ್ಟ್‌ಜೋನ್‌ನಲ್ಲೇ ಇದ್ದ ನಾನು, ಆ ಸಿನಿಮಾದಲ್ಲಿ ಅದರಾಚೆಗೆ ಹೋಗಿ ನಿಂತು ಕೆಲಸ ಮಾಡಬೇಕಾಯ್ತು. ತುಂಬ ಹಿರಿಯ ನಟರ ಜೊತೆಗೆ ಕೆಲಸ ಮಾಡಬೇಕಾಯ್ತು. ಹಾಗಾಗಿ ನಟನೆಯ ಪಾಠಗಳನ್ನೂ ಕಲಿತೆ' ಎನ್ನುವ ನಿಖಿತಾ, ಲಾಕ್‌ಡೌನ್ ಸಮಯದಲ್ಲಿ 'ಆಕಾಶವಾಣಿ ಇದು ಬೆಂಗಳೂರು ನಿಲಯ' ಎಂಬ ಹೆಸರಿನಷ್ಟೇ ವಿಭಿನ್ನ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಹಾಗೆಯೇ ಧರ್ಮ ಕೀರ್ತಿರಾಜ್ ಅವರ ಜೊತೆಗೆ ನಟಿಸುತ್ತಿರುವ 'ಟಕೀಲಾ' ಸಿನಿಮಾದ ಚಿತ್ರೀಕರಣವೂ ಬಹುತೇಕ ಮುಗಿದಿದೆ.

'ಚಿತ್ರರಂಗಕ್ಕೆ ಬಂದ ಹೊಸತರಲ್ಲಿ ನಾನು ಬಂದ ಅವಕಾಶಗಳನ್ನೆಲ್ಲ ಒಪ್ಪಿಕೊಳ್ಳುತ್ತಿದ್ದೆ. ಯಾಕೆಂದರೆ ಅವಕಾಶಗಳು ಸಿಗುವುದೇ ತುಂಬ ಕಷ್ಟವಾಗಿತ್ತು. ಆದರೆ ಈಗ ಹಾಗಲ್ಲ, ಅವಕಾಶಗಳು ಬರತೊಡಗಿವೆ. ಹಾಗಾಗಿ ಗಟ್ಟಿಯಾದ ಪಾತ್ರವುಳ್ಳ ಒಳ್ಳೆಯ ಸಿನಿಮಾಗಳನ್ನೇ ಆಯ್ದುಕೊಂಡು ನಟಿಸುತ್ತಿದ್ದೇನೆ. ನನ್ನ ನಿಲುವಿಗೆ ತಕ್ಕ ಹಾಗೆ ವಿಭಿನ್ನವಾದ ಮತ್ತು ಅಷ್ಟೇ ಗಟ್ಟಿಯಾದ ಪಾತ್ರಗಳೂ ಸಿಗುತ್ತಿವೆ' ಎಂದು ಖುಷಿಯಿಂದ ಹೇಳಿಕೊಳ್ಳುವ ಅವರಿಗೆ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಒಂದು ಆ್ಯಕ್ಷನ್ ಸಿನಿಮಾದಲ್ಲಿ ನಟಿಸಬೇಕು ಎಂಬ ಹೆಬ್ಬಯಕೆ ಇದೆ.

ಅವಕಾಶಗಳ ಹರಿವಿನಲ್ಲಿ ತಮ್ಮ ಕನಸಿನ ಪಾತ್ರವೂ ತೇಲಿಕೊಂಡು ಬರುತ್ತದೆ ಎಂಬ ನಂಬಿಕೆಯಲ್ಲಿ ನಿಖಿತಾ ಮುಗುಳ್ನಗುತ್ತಾರೆ. ■